# ತಾಲ್ಲೂಕು ಪಂಚಾಯಿತಿ ಮಟ್ಟದ ಜೀವವೈವಿಧ್ಯ ನಿರ್ವಹಣಾ ಸಮಿತಿ

(೨)

ಸಾಮಾನ್ಯ ಸಭೆ ನಡವಳಿ ಸಂಖ್ಯೆ 04, ದಿನಾಂಕ: 10-12-2014.

ತಾಲ್ಲೂಕು ಪಂಚಾಯಿತಿ, ಮುಳಬಾಗಲು

**************************************************************************************

ದಿನಾಂಕ:10-12-2014 ರಂದು ಶ್ರೀಮತಿ.ಅರ್ಚನಾ ಮಲ್ಲಿಕಾರ್ಜುನರೆಡ್ಡಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ ಇವರ ಅಧ್ಯಕ್ಷತೆಯಲ್ಲಿ ಮುಳಬಾಗಲು ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ ಸಂಜೆ. 5.00 ಗಂಟೆಗೆ ಸಭೆ ಸೇರಿ ಹಾಜರಿದ್ದ ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ, ಜೈವಿಕವೈವಿಧ್ಯ ಅಧಿನಿಯಮ 2002ರ ನಿಯಮ 41(1), ಹಾಗೂ ಜೈವಿಕ ವೈವಿಧ್ಯ ನಿಯಮಗಳು 2004ರ ನಿಯಮ 22 ಹಾಗೂ ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005ರ ನಿಯಮ 21ರ ಪ್ರಕಾರ 3 ವರ್ಷಗಳ ಅವಧಿಗೆ ಈ ಕೆಳಗಿನಂತೆ ಜೀವವೈವಿಧ್ಯತೆ ನಿರ್ವಹಣಾ ಸಮಿತಿಯನ್ನು ರಚಿಸಲಾಯಿತು.

ದಿನಾಂಕ 21/2/15
ಸಂ 2049

## ಸಮಿತಿಯ ಸದಸ್ಯರ ವಿವರಗಳು

| ಕ್ರ. ಸಂ | ಪೂರ್ಣ ಹೆಸರು | ವಯಸ್ಸು | ಹುದ್ದೆ | ವರ್ಗ | ಸಹಿ |
|---|---|---|---|---|---|
| 1 | ಶ್ರೀ.ಎಂ.ವೆಂಕಟರಾಮಪ್ಪ | 45 | ಅಧ್ಯಕ್ಷರು | ಪ.ಜಾತಿ | [signature] |
| 2 | ಶ್ರೀಮತಿ.ಬಿ.ಲಕ್ಷ್ಮೀದೇವಮ್ಮ | 55 | ಮಹಿಳಾ ಸದಸ್ಯರು | ಪ.ಪಂ | [signature] |
| 3 | ಶ್ರೀಮತಿ.ತ್ರಿವೇಣಮ್ಮ, | 45 | ಮಹಿಳಾ ಸದಸ್ಯರು | ಸಾಮಾನ್ಯ | [signature] |
| 4 | ಶ್ರೀ.ರಾಜಪ್ಪ | 44 | ಪ.ಜಾತಿ/ಪ.ಪಂ. ಸದಸ್ಯರು | ಪ.ಜಾತಿ | K.M.Rajappa |
| 5 | ಶ್ರೀ.ಕೆ.ಎಸ್.ಶ್ರೀನಿವಾಸ | 46 | ಸದಸ್ಯರು | ಸಾಮಾನ್ಯ | K.S.[signature] |
| 6 | ಶ್ರೀ.ಪಿ.ವಿ.ಶಿವರಾಮರೆಡ್ಡಿ | 64 | ಸದಸ್ಯರು | ಸಾಮಾನ್ಯ | P.V.[signature] |
| 7 | ಸಿ.ಶ್ರೀನಿವಾಸ | 50 | ಕಾರ್ಯದರ್ಶಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ. ಮುಳಬಾಗಲು | ಪ.ಜಾತಿ | [signature] |

**ಜೀವವೈವಿಧ್ಯ ನಿರ್ವಹಣಾ ಸಮಿತಿಯ ಜವಾಬ್ದಾರಿಗಳು:**

1) ಜೀವವೈವಿಧ್ಯ ನಿರ್ವಹಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವಂತಹ ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಹಾಗೂ ನಿರ್ವಹಣೆ.
2) ಜೀವವೈವಿಧ್ಯ ನಿರ್ವಹಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಸಂಪನ್ಮೂಲಗಳ ಕಾನೂನು ಬಾಹಿರ ಹಾಗೂ ಅನಿಯಮಿತ ಚಟುವಟಿಕೆಗಳನ್ನು ತಡೆಯುವುದು.
3) ಅನುಮೋದನೆ ನೀಡುವುದಕ್ಕಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿ ಅಥವಾ ಪ್ರಾಧಿಕಾರವು, ತನಗೆ ಕಳುಹಿಸಿದ ಯಾವುದೇ ವಿಷಯಗಳ ಬಗ್ಗೆ ಸಲಹೆ ನೀಡುವುದು.
4) ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯು, ತನ್ನ ಕೇಂದ್ರಾಡಳಿತದ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ, ವಾಣಿಜ್ಯ ಉದ್ದೇಶಗಳಿಗಾಗಿ, ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯುವುದಕ್ಕಾಗಿ ಅಥವಾ ಸಂಗ್ರಹಿಸುವುದಕ್ಕಾಗಿ ಯಾರೇ ವ್ಯಕ್ತಿಯಿಂದ ಶುಲ್ಕ ರೂಪವಾಗಿ ವೆಚ್ಚಗಳನ್ನು ವಿಧಿಸಬಹುದು.
5) ಜೈವಿಕ ಸಂಪನ್ಮೂಲಗಳನ್ನು ಬಳಸುವ ಸ್ಥಳೀಯ ವೈದ್ಯರು ಮತ್ತು ವೃತ್ತಿನಿರತರ ಬಗ್ಗೆ ಅಂಕಿ-ಅಂಶ ಮಾಹಿತಿಯನ್ನು ನಿರ್ವಹಿಸುವುದು.
6) ಸಮಿತಿಯು ನೀಡಲಾದ ಜೈವಿಕ ಸಂಪನ್ಮೂಲಗಳನ್ನು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಹೊಂದುವ ಅವಕಾಶದ ವಿವರಗಳ ಬಗ್ಗೆ, ವಿಧಿಸಲಾದ ಸಂಗ್ರಹಣಾ ಶುಲ್ಕದ ವಿವರಗಳ ಬಗ್ಗೆ ಮತ್ತು ಪ್ರಾಪ್ತವಾದ ಪ್ರಯೋಜನಗಳ ವಿವರಗಳು ಮತ್ತು ಅವುಗಳ ಹಂಚಿಯ ವಿಧಾನದ ಬಗ್ಗೆ ಮಾಹಿತಿಯನ್ನು ನೀಡುವ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.
7) ಜೀವವೈವಿಧ್ಯ ಹಾಗೂ ಜೀವವೈವಿಧ್ಯ ಸಂಬಂಧಿತ ಸ್ಥಳೀಯ ಸಾಂಪ್ರದಾಯಿಕ ಜ್ಞಾನದ ದಾಖಲಾತಿ ಮಾಡುವ ಕೆಲಸದಲ್ಲಿ ತೊಡಗಿಕೊಳ್ಳುವುದು ಸಮಿತಿಯ ಜವಾಬ್ದಾರಿಯಾಗಿರುತ್ತದೆ.
8) ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ನಿರ್ದೇಶನದಂತೆ ಜೀವವೈವಿಧ್ಯ ಅನುದಾನದ ಬಳಕೆ ಹಾಗೂ ನಿರ್ವಹಣೆ.

[signature]
ಅಧ್ಯಕ್ಷರು,
ಜೀವವೈವಿಧ್ಯ ನಿರ್ವಹಣಾ ಸಮಿತಿ,
ತಾಲ್ಲೂಕು ಪಂಚಾಯಿತಿ, ಮುಳಬಾಗಲು

[signature]
Deputy Conservator of Forests
Social Forestry Division, Kolar

[signature]
ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯಿತಿ.
ಮುಳಬಾಗಲು.